E-MAIL: rjdce.scholarship@gmail.com
Website www.rjdcemys.in
Phone 0821-2426696
Fax 0821-2428696

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಪ್ರಾಕಮೈ/ವಿ.ವೇ/96/2018-19

ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ,
ವಿನೋಬ ರಸ್ತೆ, ಮೈಸೂರು-570 005.
ದಿನಾಂಕ: 29-06-2018.

**ಪರಿಚಲನಾ ಆದೇಶ**

2018-19ನೇ ಸಾಲಿನಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಈ ಸುತ್ತೋಲೆಯಲ್ಲಿ ತಿಳಿಸಲಾಗಿರುವ ವಿದ್ಯಾರ್ಥಿವೇತನದ ಸಂಬಂಧ ಮೇಲ್ಕಂಡ ಸುತ್ತೋಲೆಯನ್ನು ಸರ್ಕಾರಿ ಮತ್ತು ಖಾಸಗಿ ಪ್ರಥಮ ದರ್ಜೆ ಕಾಲೇಜುಗಳಿಗೆ ಪರಿಚಲಿಸುತ್ತಾ ಅದರಂತೆ ಕ್ರಮತೆಗೆದುಕೊಂಡು ದಿನಾಂಕ:31-07-2018ರ ಒಳಗಾಗಿ ಸಂಖ್ಯಾ ಮಾಹಿತಿಯನ್ನು ಈ ಮೇಲ್ ವಿಳಾಸ : rjdce.scholarship@gmail.com ಗೆ ಹಾಗೂ ಮುದ್ರಿತ ಪ್ರತಿಯನ್ನು ಈ ಕಚೇರಿಗೆ ಸಲ್ಲಿಸಲು ಸೂಚಿಸಿದೆ.

ಈ ಪ್ರಾದೇಶಿಕ ಕಚೇರಿ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಮತ್ತು ಖಾಸಗಿ ಅನುದಾನಿತ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಸದರಿ ಸುತ್ತೋಲೆಯ ಪ್ರಕಾರ ಅರ್ಹ ಹೊಸ ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ದೊರೆಯುವಂತೆ ಸೂಕ್ತ ಕ್ರಮವಹಿಸಿ ಅರ್ಹ ವಿದ್ಯಾಥಿಗಳ (ಮೆರಿಟ್) ಪಟ್ಟಿಯನ್ನು ತಯಾರಿಸಿ ಕ್ರಮ ಸಂಖ್ಯೆ 1, 2, 6 & 7 ರಲ್ಲಿನ ವಿದ್ಯಾರ್ಥಿವೇತನಗಳ ಅರ್ಜಿಗಳನ್ನು ಈ ಕೆಳಗಿನ ಕ್ರಮದಂತೆ ಸಲ್ಲಿಸಲು ಸೂಚಿಸಿದೆ.

1) ಸಂಚಿ ಹೊನ್ನಮ್ಮ, ಸರ್.ಸಿ.ವಿ.ರಾಮನ್ ಮತ್ತು ಸೈನಿಕ ಸಿಬ್ಬಂದಿ ಮಕ್ಕಳ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ 2017-18ನೇ ಸಾಲಿನಲ್ಲಿ ಮಂಜೂರಾತಿ ನೀಡಿರುವ ವಿದ್ಯಾರ್ಥಿಗಳಿಗೆ 2018-19ನೇ ಸಾಲಿನಲ್ಲಿ ನವೀಕರಣ ವಿದ್ಯಾರ್ಥಿವೇತನ ಮಂಜೂರಾತಿಗೆ ಅರ್ಹತೆ ಹೊಂದಿದ್ದಲ್ಲಿ ನವೀಕರಣ ಅರ್ಜಿಗಳಿಗೆ ಸಂಬಂಧಪಟ್ಟಂತೆ ಮಾನ್ಯ ಆಯುಕ್ತರ ಸುತ್ತೋಲೆಯಲ್ಲಿ ತಿಳಿಸಿರುವಂತೆ ನವೀಕರಣ ವಿದ್ಯಾರ್ಥಿಗಳ ಅರ್ಹತ ಪಟ್ಟಿಯನ್ನು ಈ ಕಚೇರಿಗೆ ಸಲ್ಲಿಸಲು ಸರ್ಕಾರಿ/ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಸೂಚಿಸಿದೆ. ಈ ಸಂಬಂದ ವಿಳಂಬ ದೋರಣೆ ಪ್ರಾಂಶುಪಾಲರ ಹಂತದಲ್ಲಿ ಕಂಡುಬಂದರೆ ಮಾನ್ಯ ಆಯುಕ್ತರಿಗೆ ಶಿಸ್ತುಕ್ರಮಕ್ಕೆ ಶಿಫಾರಸ್ಸು ಮಾಡಲಾಗುವುದು. ಅರ್ಹ ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ವಿದ್ಯಾರ್ಥಿವೇತನ ವಿತರಿಸಲಾಗದ್ದಕ್ಕೆ ತಮ್ಮನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು.

2) 2018-19ನೇ ಸಾಲಿನಲ್ಲಿ ಪ್ರಥಮ ವರ್ಷದ ಬಿ.ಎ/ಬಿ.ಎಸ್ಸ್.ಸಿ/ಬಿ.ಕಾಂ/ಬಿ.ಬಿ.ಎಂ ಮತ್ತು ಬಿ.ಸಿ.ಎ ಪದವಿಗಳಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಅರ್ಜಿಗಳನ್ನು(ಸಂಚಿ ಹೊನ್ನಮ್ಮ, ಸರ್.ಸಿ.ವಿ.ರಾಮನ್ ಮತ್ತು ಸೈನಿಕ ಸಿಬ್ಬಂದಿ ಮಕ್ಕಳ ವಿದ್ಯಾರ್ಥಿವೇತನ)ನಿಯಮಾನುಸಾರ ಪ್ರಾಂಶುಪಾಲರ ಹಂತದಲ್ಲೇ ಸ್ವೀಕರಿಸಿ ಪರಿಶೀಲಿಸಿ ಮಾನ್ಯ ಆಯುಕ್ತರ ಸುತ್ತೋಲೆಯನುಸಾರ ಅರ್ಹ ವಿದ್ಯಾರ್ಥಿಗಳ ಪಟ್ಟಿಯನ್ನು ಈ ಕಚೇರಿಗೆ ಸಲ್ಲಿಸಲು ಸೂಚಿಸಿದೆ. ವಿದ್ಯಾರ್ಥಿವೇತನ ಮಂಜೂರಾತಿ ನಂತರ ವಿದ್ಯಾರ್ಥಿವೇತನ ಅರ್ಜಿಗಳನ್ನು ಈ ಕಚೇರಿಗೆ ಕಳುಹಿಸಿಕೊಡಲು ಪ್ರಾಂಶುಪಾಲರುಗಳಿಗೆ ಸೂಚಿಸಿದೆ.

3) ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳು ಅರ್ಜಿಗಳನ್ನು ಅರ್ಹತಾ ಪಟ್ಟಿಯೊಂದಿಗೆ ಸಲ್ಲಿಸಲು ಸೂಚಿಸಿದೆ.

ಅಡಕ: ಸುತ್ತೋಲೆ ಮತ್ತು ಅರ್ಜಿ ನಮೂನೆಗಳು.

ಜಂಟಿ ನಿರ್ದೇಶಕರು
ಪ್ರಾದೇಶಿಕ ಜಂಟಿ ನಿರ್ದೇಶಕರು,
ಕಾಲೇಜು ಶಿಕ್ಷಣ ಇಲಾಖೆ,
ಮೈಸೂರು - 570 005

ಇವರಿಗೆ,

ಈ ವಲಯ ವ್ಯಾಪ್ತಿಯ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಅಗತ್ಯ ಕ್ರಮಕ್ಕಾಗಿ.

ಪ್ರತಿಗಳನ್ನು:

1) ಮಾನ್ಯ ಆಯುಕ್ತರು ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
2) ಕಚೇರಿ ಪ್ರತಿ.